**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.444/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | ಮಲ್ಲಪ್ಪ ಹಿರೇಬಿದರಿ | ಸಿಡಬ್ಲ್ಯೂ | 1 |
| ತಂದೆಯ ಹೆಸರು | ಲಕ್ಷ್ಮಣ | ಪಿಡಬ್ಲ್ಯೂ | 3 |
| ವಯಸ್ಸು | 48 ವರ್ಷ | | |
| ಉದ್ಯೋಗ | ಪ್ರಥಮ ದರ್ಜೆ ಸಹಾಯ<br>ಜಿಲ್ಲಾಧಿಕಾರಿಗಳ<br>ಕಾರ್ಯಾಲಯ ಹಾವೇರಿ | | |
| ವಾಸಸ್ಥಳ | ಹಾವೇರಿ | | |

**ದಿಃ11.02.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

1) ನಾನು ಹಾವೇರಿಯ ತಹಶೀಲ್ದಾರ ಕಛೇರಿಯಲ್ಲಿ ಆಹಾರ ನಿರೀಕ್ಷಕನಾಗಿ 2016 ರಿಂದ 2018 ರವರೆಗೆ ಕಾರ್ಯ ನಿರ್ವಹಿಸಿದ್ದೇನೆ. ಚಾ.ಸಾ-8 ಇವರು ಹಾವೇರಿಯ ತಹಶೀಲ್ದಾರ ಕಛೇರಿಯಲ್ಲಿ ತಹಶೀಲ್ದಾರ ಆಗಿ ಕೆಲಸ ಮಾಡುತ್ತಿದ್ದರು. ಚಾ.ಸಾ-9 ಇವರು ಆಹಾರ ಶಿರಸ್ತೇದಾರ ಆಗಿ ಕೆಲಸ ಮಾಡುತ್ತಿದ್ದರು. 2016 ನೇ ಸಾಲಿನಲ್ಲಿ ಸರ್ಕಾರದಿಂದ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಫಲಾನುಭವಿಗಳಿಗೆ ಆಹಾರ ಸಾಮಗ್ರಿಗಳನ್ನು ವಿತರಣೆ ಮಾಡಲು ಕೂಪನ ವ್ಯವಸ್ಥೆಯನ್ನು ಮಾಡಿದ್ದು, ಸದರಿ ಕೂಪನ್‌ಗಳನ್ನು ಆನಲೈನ ಮೂಲಕ ನಿಗದಿಪಡಿಸಿದ ಸೇವಾಕೇಂದ್ರದಿಂದ ಪಡೆದುಕೊಂಡು ಸಂಬಂದಪಟ್ಟ ನ್ಯಾಯಬೆಲೆ ಅಂಗಡಿಗಳಿಗೆ ಹಾಜರುಪಡಿಸಿದಲ್ಲಿ ಅಂಗಡಿಯವರನ್ನು ಆಹಾರ ಧಾನ್ಯಗಳನ್ನು ವಿತರಣೆ ಮಾಡುತ್ತಿದ್ದರು. 1 ನೇ ಆರೋಪಿಯು ಆಹಾರ ಪಡಿತರ ವಿತರಣೆ ಮಾಡಲು

ಪರವಾನಿಗೆದಾರನಾಗಿದ್ದು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಒಂದೇ ಆಧಾರ ಸಂಖ್ಯೆಗೆ 26 ಕೂಪನಗಳನ್ನು ಮತ್ತು 2 ಆಧಾರಕಾರ್ಡಗಳಿಗೆ ಬೇರೆ 26 ಕೂಪನಗಳನ್ನು ಬೇರೆ ಆಧಾರಕಾರ್ಡ ನಂಬರಗಳನ್ನು ಜೋಡಿಸಿ ಒಟ್ಟು 26 ಕೂಪನಗಳನ್ನು ಆರೋಪಿಗಳು ಸೃಷ್ಟಿಸಿ ರೂ.51,843/- ಗಳ ಆಹಾರ ಸಾಮಗ್ರಿಗಳನ್ನು ದುರುಪಯೋಗಪಡಿಸಿಕೊಂಡಿರುವ ಬಗ್ಗೆ ದಿನಾಂಕಃ 22.10.2016 ರಂದು ಸರ್ಕಾರದ ಎನ್.ಐ.ಸಿ ಯಿಂದ ಆರೋಪಿಗಳು ಒಂದೇ ಆಧಾರಕಾರ್ಡಿನ ಮೇಲೆ ಸದರಿ ನಂಬರಿನ ಆಧಾರಕಾರ್ಡಿನ ಮೇಲೆ ಬೇರೆ ಬೇರೆ ವ್ಯಕ್ತಿಗಳ ಆಹಾರದ ಕೂಪನ್‌ಗಳನ್ನು ವಿತರಣೆ ಮಾಡಿ ಮೇಲೆ ಹೇಳಿದ ರೂ.51,843/- ಗಳನ್ನು ದುರುಪಯೋಗಪಡಿಸಿಕೊಂಡಿರುವ ಮಾಹಿತಿಯನ್ನು ಆಧರಿಸಿ ನಂತರ ಹಾವೇರಿ ಜಿಲ್ಲಾಧಿಕಾರಿಯವರು ಹಾವೇರಿಯ ತಹಶೀಲ್ದಾರ ಇವರಿಗೆ ನಿರ್ದೇಶನ ನೀಡಿ 1 ನೇ ಆರೋಪಿಗೆ ಕೊಟ್ಟಂತಹ ಪರವಾನಿಗೆಯನ್ನು ರದ್ದುಗೊಳಿಸಲು ಜಿಲ್ಲಾಧಿಕಾರಿಯವರು ಆದೇಶ ಮಾಡಿ ನಂತರ ಹಾವೇರಿಯ ತಹಶೀಲ್ದಾರ ಇವರಿಗೆ ಮಾಹಿತಿಯನ್ನು ಕೊಟ್ಟಿದ್ದಾರೆ, ಅಲ್ಲದೇ ಕಾರ್ಡುದಾರರಿಗೆ ಆಹಾರ ಸಾಮಗ್ರಿಗಳನ್ನು ವಿತರಿಸಲು ಬೇರೆ ಅಂಗಡಿಗಳಿಗೆ ಬದಲಿ ವ್ಯವಸ್ಥೆ ಮಾಡಿರುತ್ತಾರೆ.

2) ನಂತರ ದಿನಾಂಕಃ 25.10.2016 ರಂದು ಹಾವೇರಿಯ ತಹಶೀಲ್ದಾರ ಇವರಿಗೆ ನಾನು ಖುದ್ದಾಗಿ ವರದಿ ಸಲ್ಲಿಸಿದ್ದೇನೆ. ನಂತರ ಹಾವೇರಿಯ ತಹಶೀಲ್ದಾರ ಇವರು ಹಾವೇರಿ ಜಿಲ್ಲಾಧಿಕಾರಿ ಇವರಿಗೆ ನಾನು ಕೊಟ್ಟಂತಹ ವರದಿಯನ್ನು ಅವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ಆ ನಂತರ ದಿನಾಂಕಃ 26.10.2016 ರಂದು ಹಾವೇರಿಯ ಜಿಲ್ಲಾಧಿಕಾರಿಯವರು ಸಂಬಂದಪಟ್ಟ ನ್ಯಾಯಬೆಲೆ ಅಂಗಡಿಯ ಮಾಲೀಕರ ಮೇಲೆ ಮತ್ತು ಸೇವಾಕೇಂದ್ರದ ಮಾಲೀಕರಾದ 2 ನೇ ಆರೋಪಿಯ ವಿರುದ್ಧ

ಪ್ರಕರಣವನ್ನು ದಾಖಲುಪಡಿಸಲು ಹಾವೇರಿ ಜಿಲ್ಲಾಧಿಕಾರಿಯವರು ಹಾವೇರಿ ತಹಶೀಲ್ದಾರ ಇವರಿಗೆ ನಿರ್ದೇಶನ ನೀಡಿರುತ್ತಾರೆ. ಹಾವೇರಿ ತಹಶೀಲ್ದಾರ ಇವರು ದಿನಾಂಕಃ 02.11.2016 ರಂದು 1 ಮತ್ತು 2 ನೇ ಆರೋಪಿಯ ವಿರುದ್ಧ ಪ್ರಕರಣವನ್ನು ದಾಖಲಿಸಲು ಆದೇಶವನ್ನು ಕೊಟ್ಟಿರುತ್ತಾರೆ. ಆ ಪ್ರಕಾರ ದಿನಾಂಕಃ 04.11.2016 ರಂದು ಹಾವೇರಿಯ ಶಹರ ಪೊಲೀಸ ಠಾಣೆಗೆ ಹೋಗಿ ಆರೋಪಿಗಳು ಮಾಡಿದ ಕೃತ್ಯದ ಕುರಿತಾಗಿ ದೂರನ್ನು ಕೊಟ್ಟಿದ್ದೇನೆ. ಸಾಕ್ಷಿಯು ಸದರಿ ಪಿರ್ಯಾದಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿ.ಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-4(ಎ) ಎಂದು ಗುರುತಿಸಲಾಯಿತು. ಹಾವೇರಿಯ ತಹಶೀಲ್ದಾರ ಇವರು ನನಗೆ ಆರೋಪಿಗಳ ವಿರುದ್ಧ ಪಿರ್ಯಾದಿಯನ್ನು ಸಲ್ಲಿಸಲು ಕೊಟ್ಟಂತಹ ಆದೇಶದ ದೃಢೀಕೃತ ಪ್ರತಿಯನ್ನು ಸಾಕ್ಷಿದಾರರಿಗೆ ತೋರಿಸಲಾಗಿ ಸದರಿ ಆದೇಶದ ಪ್ರಕಾರ ನಾನು ಆರೋಪಿಗಳ ವಿರುದ್ಧ ಪಿರ್ಯಾದಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಯು ಈಗಾಗಲೇ ನಿ.ಪಿ-3 ಎಂದು ಗುರುತಿಸಲಾಗಿರುತ್ತದೆ. ನಾನು ಆರೋಪಿಗಳನ್ನು ನೋಡಿದರೆ ಗುರುತಿಸಬಲ್ಲೆ.

**ಪಾಟೀ ಸವಾಲುಃ ಶ್ರೀ.ಸಿ.ಹೆಚ್.ಜಿ ವಕೀಲರಿಂದಃ 2 ನೇ ಆರೋಪಿ ಪರವಾಗಿಃ**

3) ಆರೋಪಿಗಳಿಗೆ ಎನ್.ಐ.ಸಿ ಯಿಂದ ಆಹಾರದ ಕೂಪನಗಳನ್ನು ಯಾವ ರೀತಿ ತೆಗೆಯಬೇಕು ಎನ್ನುವ ಕುರಿತಾಗಿ ಸರ್ಕಾರದಿಂದ ತರಬೇತಿಯನ್ನು ಕೊಟ್ಟಿಲ್ಲ ಅಂದರೆ ಸರಿ. 1 ನೇ ಆರೋಪಿಯು ಕೇವಲ ಆಹಾರ ವಿತರಣೆ ಮಾತ್ರ ಮಾಡುತ್ತಾನೆ ಅಂದರೆ ಸರಿ, ಆದರೆ ಆತನು ಕೂಪನಗಳನ್ನು ತೆಗೆಯುವ ಕೆಲಸ ಮಾಡುವದಿಲ್ಲ ಅಂದರೆ ಸರಿ. ಆಹಾರದ ಕೂಪನಗಳನ್ನು ಇರುವಂತಹ ಕೋಡ ನಂಬರ ಕೇವಲ ತಹಶೀಲ್ದಾರ ಮತ್ತು ಆಹಾರ ನಿರೀಕ್ಷಕರಿಗೆ ಮಾತ್ರ ಗೊತ್ತಿರುತ್ತದೆ ಇವರನ್ನೂ ಹೊರತುಪಡಿಸಿ ಬೇರೆ

ವ್ಯಕ್ತಿಗಳಿಗೆ ಗೊತ್ತಿರುವದಿಲ್ಲ ಅಂದರೆ ಸರಿ. ಹಾವೇರಿಯ ಜಿಲ್ಲಾಧಿಕಾರಿಯವರು ಹಾವೇರಿ ತಹಶೀಲ್ದಾರ ಇವರಿಗೆ ನಿರ್ದೇಶನವನ್ನು ನೀಡಿ ಈ ಪ್ರಕರಣದಲ್ಲಿ ಹೇಳಿದಂತಹ ಸಾಮಾನ್ಯವಾಗಿ 25 ಕೂಪನಗಳಿಂದ ಮೇಲ್ಪಟ್ಟು ಯಾರಾದರೂ ಆಹಾರದ ಕೂಪನ ತೆಗೆದರೆ ಅಂತಹವರ ವಿರುದ್ಧ ಪ್ರಕರಣವನ್ನು ದಾಖಲಿಸಿ ಎಂದು ನಿರ್ದೇಶನ ನೀಡಿರುತ್ತಾರೆ ಅಂದರೆ ಸರಿ.

4) 1 ನೇ ಆರೋಪಿಯ ವಿರುದ್ಧ ಯಾವುದೇ ಸಾರ್ವಜನಿಕರು ಆಹಾರವನ್ನು ವಿತರಣೆ ಮಾಡಿಲ್ಲ ಎನ್ನುವ ಕುರಿತಾಗಿ ಯಾವುದೇ ದೂರನ್ನು 1 ನೇ ಆರೋಪಿಯ ವಿರುದ್ಧ ನಮಗೆ ಕೊಟ್ಟಿಲ್ಲ ಅಂದರೆ ಸರಿ. ಈ ಪರಕರಣದಲ್ಲಿ ಹೇಳಿದಂತಹ ತಂತ್ರಾಂಶದಲ್ಲಿ ತೊಂದರೆ ಕುರಿತಂತೆ ಕರ್ನಾಟಕದ ತುಂಬೆಲ್ಲಾ ಹಲವಾರು ಕ್ರಿಮಿನಲ್ ಪ್ರಕರಣಗಳು ಆಗಿದ್ದವು ಅಂದರೆ ಸರಿ. ನಾನು ತಹಶೀಲ್ದಾರ ಇವರಿಗೆ ಹಾವೇರಿಯ ಜಿಲ್ಲಾಧಿಕಾರಿಯವರು ನಿರ್ದೇಶನ ಕೊಟ್ಟ ನಂತರ ತಹಶೀಲ್ದಾರ ಇವರು ನನಗೆ ಆರೋಪಿಗಳ ವಿರುದ್ಧ ಪಿರ್ಯಾದಿಯನ್ನು ಸಲ್ಲಿಸಲು ಕೊಟ್ಟಂತಹ ನಿರ್ದೇಶನದ ದಿನಾಂಕವನ್ನು ಹೊರತುಪಡಿಸಿ ಬೇರೆ ಎರಡು ದಿನಗಳ ನಂತರ ಆರೋಪಿಗಳ ವಿರುದ್ಧ ಪಿರ್ಯಾದಿಯನ್ನು ಸಲ್ಲಿಸಿದ್ದು ಆ ಎರಡು ದಿನಗಳು ಯಾವ ಕಾರಣಕ್ಕಾಗಿ ವಿಳಂಬವಾಗಿರುತ್ತದೆ ಎಂದು ನನ್ನ ಪಿರ್ಯಾದಿಯಲ್ಲಿ ಕಾಣಿಸಿಲ್ಲ ಅಂದರೆ ಸರಿ.

5) 1 ನೇ ಆರೋಪಿಗೆ ಹಾವೇರಿ ಜಿಲ್ಲಾಧಿಕಾರಿಯವರು ಈಗಲೂ ಸಹ ಆಹಾರವನ್ನು ವಿತರಣೆ ಮಾಡಲು ಪರವಾನಿಗೆ ಕೊಟ್ಟಿದ್ದರಿಂದ ಈಗಲೂ ಸಹ 1 ನೇ ಆರೋಪಿ ಸರ್ಕಾರದ ಪರವಾನಿಗೆಯನ್ನು ಹೊಂದಿ ಆಹಾರ ವಿತರಣೆ ಮಾಡುತ್ತಿದ್ದಾನೆ ಅಂದರೆ ಆ ವಿಷಯ ನನಗೆ ಗೊತ್ತಿರುವದಿಲ್ಲ. ಹಾವೇರಿಯ ಜಿಲ್ಲಾಧಿಕಾರಿಯವರು ಈ ಪ್ರಕರಣದಲ್ಲಿ ಹೇಳಿದಂತಹ ಮಾಹಿತಿಗೆ ಸಂಬಂದಪಟ್ಟಂತೆ ಆದಂತಹ ಪ್ರಕರಣಗಳಿಗೆ ಹಾವೇರಿಯ ಜಿಲ್ಲಾಧಿಕಾರಿಗಳು

ಮತ್ತು ಇನ್ನಿತರೆ ಜಿಲ್ಲೆಯ ಜಿಲ್ಲಾಧಿಕಾರಿಗಳು ದಂಡವನ್ನು ರೂ.20,000/- ಕಟ್ಟಿಸಿಕೊಂಡು ಅಂತಹ ಪ್ರಕರಣಗಳನ್ನು ರದ್ದುಪಡಿಸಿರುತ್ತಾರೆ ಅಂದರೆ ಆ ವಿಷಯ ನನಗೆ ಗೊತ್ತಿರುವದಿಲ್ಲ. ನಂತರ ಆರೋಪಿಗಳು ಸದರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿ ಆ ಮೇಲ್ಮನವಿಯಲ್ಲಿ ಆರೋಪಿಗಳಿಗೆ ಪುನಃ ಆಹಾರ ವಿತರಣೆಯ ಪರವಾನಿಗೆ ಕೊಡಬೇಕು ಎಂದು ಜಿಲ್ಲಾಧಿಕಾರಿಯವರಗೆ ನಿರ್ದೇಶನ ಕೊಟ್ಟಿರುತ್ತಾರೆ ಅಂದರೆ ಸರಿ. ಈ ಪ್ರಕರಣದಲ್ಲಿ ನಾನು ಕೊಟ್ಟಂತಹ ಪಿರ್ಯಾದಿ ಬಿಟ್ಟು ಬೇರೆ ವಿಷಯ ನನಗೆ ಗೊತ್ತಿಲ್ಲ ಅಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಹಾವೇರಿಯ ಜಿಲ್ಲಾಧಿಕಾರಿಗಳು ತಹಶೀಲ್ದಾರ ಇವರಿಗೆ ಕೊಟ್ಟಂತಹ ನಿರ್ದೇಶನದ ಮೇಲೆ ಆರೋಪಿಗಳ ವಿರುದ್ಧ ಹಾವೇರಿಯ ಶಹರ ಪೊಲೀಸ ಠಾಣೆಯಲ್ಲಿ ಸುಳ್ಳು ಪಿರ್ಯಾದಿ ಸಲ್ಲಿಸಿ ಸುಳುಳ ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ಈ ಪ್ರಕರಣದಲ್ಲಿ ಮುಂದೆ ಆದಂತಹ ಎಲ್ಲ ಮಾಹಿತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಅಂದರೆ ಸರಿಯಲ್ಲ. ಆರೋಪಿಗಳು ಈ ಪ್ರಕರಣದಲ್ಲಿ ಹೇಳಿದಂತಹ ಯಾವುದೇ ತಪ್ಪುಗಳನ್ನು ಮಾಡದೇ ಇದ್ದರೂ ಸಹ ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

6)ಕೋಪನ್ ಕಾರ್ಡ ವಿತರಣೆ ಮಾಡುವ ವ್ಯಕ್ತಿಗಳಿಗೆ ರೇಷನ ಕಾರ್ಡ ಮಾತ್ರ ನೋಡಿ  ವಿತರಣೆ ಮಾಡುವ ವ್ಯವಸ್ಥೆ ಇರುತ್ತದೆ ಹೊರತು ಆಧಾರಕಾರ್ಡಿ ನೋಡಿ ವಿತರಣೆ ಮಾಡುವ ವ್ಯವಸ್ಥೆ ಇರುವದಿಲ್ಲ ಅಂದರೆ ಸರಿ. ಆದಾರಕಾರ್ಡಗಳಿಗೆ ರೇಷನ ಕಾರ್ಡಗಳಿಗೆ ಜೋಡಣೆ ಮಾಡಿ ನಂತರ ಅದನ್ನು ಸೀಡಿಂಗ ಮಾಡುವ ಕೆಲಸ ನಮ್ಮದು ಅಂದರೆ ಸರಿ. ಆ ವಿಷಯಕ್ಕೆ ಸಂಬಂದಪಟ್ಟಂತೆ ಸಂಪೂರ್ಣ ಸಿ.ಡಿ. ಮಾಡಿರುತ್ತೇವೆ ಎಂದು ಸಾಕ್ಷಿಯು

ನುಡಿಯುತ್ತಾರೆ. ಸದರಿ ಆದಾರಕಾರ್ಡಗಳನ್ನು ಸಿ.ಡಿ.ಗೆ ಮಾಡಿರುವ ಕೆಲಸಗಳಲ್ಲಿ ಆಹಾರನಿರೀಕ್ಷಕರ ತಪ್ಪು ಇರುತ್ತವೆ ಅಂದರೆ ಸರಿಯಲ್ಲ. ಹಾವೇರಿಯಲ್ಲಿ ಕೂಪನ ವಿತರಣೆ ಮಾಡುವ 10 ಕೇಂದ್ರಗಳು ಇವೆ ಅಂದರೆ ಸರಿಯಲ್ಲ. ನಾವು ಕೇವಲ ಹಾವೇರಿಯಲ್ಲಿ ಮೂರು ಕೇಂದ್ರಗಳಿಗೆ ಆಹಾರ ವಿತರಣೆ ಕೂಪನಗಳನ್ನು ಕೊಡಲು ಪರವಾನಿಗೆ ಕೊಟ್ಟಿದ್ದೇವೆ. ಈ ಪ್ರಕರಣದಲ್ಲಿ ಹೇಳಿದಂತಹ ಯಾವುದೇ ತಪ್ಪುಗಳನ್ನು ಆರೋಪಿಗಳು ಮಾಡಿಲ್ಲ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ.ಎನ್.ಜಿ.ಹೆಚ್ ವಕೀಲರಿಂದಃ 2 ನೇ ಆರೋಪಿ ವಕೀಲರು ಮಾಡಿದ ಪಾಟೀ ಸವಾಲನ್ನು 3 ನೇ ಆರೋಪಿ ಪರ ವಕೀಲರು ಅನುಮೋದಿಸಿಕೊಳ್ಳುತ್ತಾರೆ.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.